# ಭಾರತದಲ್ಲಿ ನ್ಯಾಯ ವಿಲೇವಾರಿಯಲ್ಲಿ ಕರ್ನಾಟಕ ಮುಂಚೂಣಿ, ದಕ್ಷಿಣ ಭಾರತದ ರಾಜ್ಯಗಳ ಅಗ್ರಸ್ಥಾನ ಮುಂದುವರಿಕೆ: 3ನೇ ಇಂಡಿಯಾ ಜಸ್ಟೀಸ್ ವರದಿ

**ಕೆಲವು ಆಸಕ್ತಿಕರ ಸುಧಾರಣೆಗಳು:**

- ಕಾನೂನು ನೆರವಿಗಾಗಿ ಬಜೆಟ್‌ನಲ್ಲಿ ರಾಜ್ಯಗಳು ನಿಯೋಜಿಸಿರುವ ಮೊತ್ತ ಹೆಚ್ಚುತ್ತಿದೆ. 2021-22 ರ ಪ್ರಕಾರ ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಕಾನೂನು ನೆರವು ಬಜೆಟ್‌ಗಳಿಗೆ ಶೇಕಡಾ 60 ಕ್ಕಿಂತ ಹೆಚ್ಚು ಕೊಡುಗೆ ನೀಡಿವೆ.
- ದೇಶದಲ್ಲಿ, ಅಧೀನ ನ್ಯಾಯಾಲಯದಲ್ಲಿ ಮಹಿಳೆಯರ ಪಾಲು 33% ಮೀರಿದೆ.
- ದೇಶದಲ್ಲಿ, ಪೊಲೀಸ್ ಮೇಲೆ ಮಾಡುವ ವೆಚ್ಚವು ವಿತ್ತ ವರ್ಷ 2017-18 ರಲ್ಲಿನ ರೂ. 912 ಕ್ಕೆ ಹೋಲಿಸಿದರೆ ವಿತ್ತವರ್ಷ 2020-21 ರಲ್ಲಿ ರೂ. 1151 ಕ್ಕೆ ಏರಿಕೆಯಾಗಿದೆ
- ವೀಡಿಯೋ ಕಾನ್ಫರೆನ್ಸ್ ಸೌಲಭ್ಯ ಹೊಂದಿರುವ ಜೈಲುಗಳ ಪಾಲು 60% (ಐಜೆಆರ್ 2020) ರಿಂದ 84% ಕ್ಕೆ ಏರಿಕೆಯಾಗಿದೆ

**ಆದರೆ, ದೇಶದಲ್ಲಿ ಕೊರತೆ ಇದೆ:**

- ಕೈದಿಗಳ ಸಂಖ್ಯೆ 130% ಆಗಿದ್ದು, ಇದು 2010 ರಿಂದಲೇ ಅತಿ ಹೆಚ್ಚಾಗಿದೆ; 2/3 ಕ್ಕೂ ಹೆಚ್ಚು ಕೈದಿಗಳ ಅಪರಾಧ ಇನ್ನೂ ಸಾಬೀತಾಗಬೇಕಿದೆ
- ಕಳೆದ ಒಂದು ದಶಕದಲ್ಲಿ ದುಪ್ಪಟ್ಟಾಗಿದ್ದರೂ ಪೊಲೀಸ್ ಪಡೆಯಲ್ಲಿ ಮಹಿಳೆಯರ ಪ್ರಮಾಣ 11.75% ಆಗಿದೆ
- ಹೈಕೋರ್ಟ್ ಜಡ್ಜ್‌ಗಳು, ಪೊಲೀಸ್ ಅಧಿಕಾರಿಗಳ ಹುದ್ದೆ ಖಾಲಿ ಹೆಚ್ಚಳ; ಸುಮಾರು 30%
- ದೇಶದಲ್ಲಿ ಕಾನೂನು ನೆರವು ಕೇಂದ್ರ, ಸಂಖ್ಯೆ 44% ರಷ್ಟು ಕುಸಿತವಾಗಿದೆ (2019-20 ರಲ್ಲಿ 23,022 ರಿಂದ 2020-21 ರಲ್ಲಿ 12,976)

**ಏಪ್ರಿಲ್ 4, 2023, ನವದೆಹಲಿ:** ದೇಶದಲ್ಲಿ ರಾಜ್ಯಗಳ ನ್ಯಾಯದಾನದ ವಿಷಯದಲ್ಲಿ ಭಾರತದ ಏಕೈಕ ಶ್ರೇಯಾಂಕವಾಗಿರುವ ಇಂಡಿಯಾ ಜಸ್ಟೀಸ್ ರಿಪೋರ್ಟ್ (ಐಜೆಆರ್) 2022 ಇಂದು ವರದಿಯನ್ನು ಪ್ರಕಟಿಸಿದ್ದು, 18 ದೊಡ್ಡ ಮತ್ತು ಮಧ್ಯಮ ಗಾತ್ರ ರಾಜ್ಯಗಳಲ್ಲಿ (ತಲಾ ಒಂದು ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ) ಕರ್ನಾಟಕ ಪ್ರಥಮ ಶ್ರೇಯಾಂಕವನ್ನು ಪಡೆದಿದ್ದು, ನಂತರದಲ್ಲಿ ತಮಿಳುನಾಡು (2020: 2ನೇ ಸ್ಥಾನ), ತೆಲಂಗಾಣ

(2020: 3ನೇ ಸ್ಥಾನ), ಗುಜರಾತ್ (2020: 6ನೇ ಸ್ಥಾನ) ಮತ್ತು ಆಂಧ್ರ ಪ್ರದೇಶ (2020: 12ನೇ ಸ್ಥಾನ) ಪಡೆದಿವೆ. ಏಳು ಸಣ್ಣ ರಾಜ್ಯಗಳ ಪೈಕಿ (ತಲಾ ಒಂದು ಕೋಟಿಗೂ ಕಡಿಮೆ ಜನಸಂಖ್ಯೆ ಇರುವ) ಸಿಕ್ಕಿಂ (2020: 2ನೇ ಸ್ಥಾನ), ಅರುಣಾಚಲ ಪ್ರದೇಶ (2020: 5ನೇ ಸ್ಥಾನ) ಮತ್ತು ತ್ರಿಪುರಾ (2020: 1ನೇ ಸ್ಥಾನ) ಇವೆ.

ಇಂಡಿಯಾ ಜಸ್ಟೀಸ್ ರಿಪೋರ್ಟ್ (ಐಜೆಆರ್) ಅನ್ನು 2019 ರಲ್ಲಿ ಟಾಟಾ ಟ್ರಸ್ಟ್ಸ್ ಆರಂಭಿಸಿದ್ದು, ಇದು ಮೂರನೇ ಆವೃತ್ತಿಯಾಗಿದೆ. ಪಾಲುದಾರರ ಪೈಕಿ ಸೆಂಟರ್ ಫಾರ್ ಸೋಶಿಯಲ್ ಜಸ್ಟೀಸ್, ಕಾಮನ್ ಕಾಸ್, ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಶಿಯೇಟಿವ್, ದಕ್ಷ್, ಟಿಸ್-ಪ್ರಯಾಸ್, ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ ಮತ್ತು ಹೌ ಇಂಡಿಯಾ ಲೈವ್ಸ್ ಸೇರಿವೆ.

ಈ ಹಿಂದಿನ ಎರಡು ವರದಿಗಳಂತೆಯೇ, 24 ತಿಂಗಳ ಕಠಿಣ ಸಂಶೋಧನೆಯ ನಂತರ ಐಜೆಆರ್ 2022 ಅನ್ನು ಬಿಡುಗಡೆ ಮಾಡಲಾಗಿದ್ದು, ಪರಿಣಾಮಕಾರಿಯಾಗಿ ನ್ಯಾಯದಾನ ಮಾಡುವ ನಿಟ್ಟಿನಲ್ಲಿ **ರಾಜ್ಯಗಳ ನ್ಯಾಯದಾನ ವ್ಯವಸ್ಥೆಯ ಸಾಮರ್ಥ್ಯದ** ಪ್ರಗತಿಯನ್ನು ವಿಶ್ಲೇಷಿಸಿದೆ. ಅಧಿಕೃತ ಸರ್ಕಾರಿ ಮೂಲಗಳಿಂದ ಪಡೆದ ಇತ್ತೀಚಿನ ಅಧಿಕೃತ ಅಂಕಿ ಅಂಶಗಳನ್ನು ಆಧರಿಸಿ, ನಾಲ್ಕು ನ್ಯಾಯದಾನ ವ್ಯವಸ್ಥೆಗಳಾದ ಪೊಲೀಸ್, ನ್ಯಾಯಾಂಗ, ಜೈಲು ಮತ್ತು ಕಾನೂನು ನೆರವಿನ ಬಗೆಗಿನ ಡೇಟಾವನ್ನು ಬಳಸಿಕೊಂಡಿದೆ. ಪ್ರತಿ ಅಂಶವನ್ನೂ ಬಜೆಟ್, ಮಾನವ ಸಂಪನ್ಮೂಲ, ಕೆಲಸದ ಹೊರೆ, ವೈವಿಧ್ಯತೆ, ಮೂಲಸೌಕರ್ಯ ಮತ್ತು ಟ್ರೆಂಡ್‌ಗಳ ಮೂಲಕ ವಿಶ್ಲೇಷಿಸಲಾಗುತ್ತದೆ (ಐದು ವರ್ಷದ ಅವಧಿಯಲ್ಲಿ ಸುಧಾರಣೆಯ ಧ್ಯೇಯ) ಆಧಾರದಲ್ಲಿ ಹಾಗೂ ರಾಜ್ಯದ ಘೋಷಿತ ಮಾನದಂಡಗಳು ಮತ್ತು ಬೆಂಚ್‌ಮಾರ್ಕ್‌ಗಳಿಗೆ ಹೋಲಿಕೆ ಮಾಡಿ ವಿಶ್ಲೇಷಿಸಲಾಗುತ್ತಿದೆ. ಈ ಮೂರನೆಯ ಐಜೆಆರ್ ಕೂಡಾ 25 ರಾಜ್ಯ ಮಾನವ ಹಕ್ಕುಗಳ ಆಯೋಗದ ಸಾಮರ್ಥ್ಯವನ್ನು ಪ್ರತ್ಯೇಕವಾಗಿ ವಿಶ್ಲೇಷಿಸುತ್ತದೆ (ಇನ್ನಷ್ಟು ಮಾಹಿತಿಗಾಗಿ ಎಸ್‌ಎಚ್‌ಆರ್‌ಸಿ ವಿವರಣೆಯನ್ನು ನೋಡಿ).

**ಕರ್ನಾಟಕದ ಸಾಧನೆ**

ಕಳೆದ ಮೂರು ವರದಿಗಳಲ್ಲಿ ಕರ್ನಾಟಕ ತನ್ನ ಕಾರ್ಯಕ್ಷಮತೆಯನ್ನು ಗಮನಾರ್ಹವಾಗಿ ಹೆಚ್ಚಿಸಿಕೊಂಡಿದೆ. 2020 ಮತ್ತು 2022 ರ ಮಧ್ಯದ 61 ಹೋಲಿಸಬಹುದಾದ ಸೂಚಕಗಳ ಪೈಕಿ, ಎಲ್ಲ ಆಧಾರ ಸ್ತಂಭಗಳ ಪೈಕಿ 43 ಸೂಚಕಗಳಲ್ಲಿ ಕರ್ನಾಟಕ ಅತಿ ಹೆಚ್ಚು ಸುಧಾರಣೆ ಕಂಡಿದೆ. ಮೂರು ಐಜೆಆರ್‌ಗಳಲ್ಲೂ, ಪೊಲೀಸ್ ವಿಭಾಗದಲ್ಲಿ ಪ.ಜಾ, ಪ.ಪಂ ಮತ್ತು ಒಬಿಸಿ ಕೋಟಾವನ್ನು ಪೂರೈಸಿದ ಏಕೈಕ ರಾಜ್ಯ ಇದಾಗಿದೆ.

ಐಜೆಆರ್ 2019 ರಲ್ಲಿ, ಇದು 6ನೇ ಸ್ಥಾನವನ್ನು ಹೊಂದಿತ್ತು. 2021 ಜನವರಿಯಲ್ಲಿ ಪ್ರಕಟವಾದ ಮುಂದಿನ ವರದಿಯಲ್ಲಿ ಇದರ ಕಾರ್ಯಕ್ಷಮತೆ ಕುಸಿದಿತ್ತು. ನಂತರ, ಇದು 14ನೇ ಸ್ಥಾನಕ್ಕೆ ಕುಸಿಯಿತು. ಇಂಡಿಯಾ ಜಸ್ಟೀಸ್ ರಿಪೋರ್ಟ್‌ನ ಮೂರನೇ ಆವೃತ್ತಿಯಲ್ಲಿ, ರಾಜ್ಯವು 1ನೇ ಸ್ಥಾನಕ್ಕೆ ತೆರಳಿತು. ಇದಕ್ಕೆ ಪ್ರಮುಖ ಕಾರಣಗಳೆಂದರೆ:

1. 2019 ರಲ್ಲಿ 47% ರಿಂದ 27% ಕ್ಕೆ ಹೈಕೋರ್ಟ್ ಜಡ್ಜ್ ಖಾಲಿ ಹುದ್ದೆಯನ್ನು ಕಡಿಮೆ ಮಾಡಿರುವುದು
2. 2019 ಡಿಸೆಂಬರ್‌ನಲ್ಲಿ 30% ಇಂದ 2021 ಡಿಸೆಂಬರ್‌ನಲ್ಲಿ 21.3% ಕ್ಕೆ ಕೇಡರ್ ಸಿಬ್ಬಂದಿ ಖಾಲಿ ಹುದ್ದೆಯನ್ನು ಕಡಿಮೆ ಮಾಡಿರುವುದು
3. 2019 ಡಿಸೆಂಬರ್‌ನಲ್ಲಿ 93% ಇಂದ 2021 ಡಿಸೆಂಬರ್‌ನಲ್ಲಿ 20% ಕ್ಕೆ ಪರಿವರ್ತನೆ ಮಾಡುವ ಸಿಬ್ಬಂದಿ ಖಾಲಿ ಹುದ್ದೆಯನ್ನು ಕಡಿಮೆ ಮಾಡಿರುವುದು
4. 2016 ರಿಂದ ಜೈಲು ಸಿಬ್ಬಂದಿಯಲ್ಲಿ ಮಹಿಳೆಯರ ಪಾಲು ಅಧಿಕ. 2021 ರಲ್ಲಿ 3 ರಲ್ಲಿ ಸುಮಾರು 1 ಸಿಬ್ಬಂದಿ ಮಹಿಳೆಯಾಗಿದ್ದಾರೆ
5. ರಾಜ್ಯದಲ್ಲಿನ ಎಲ್ಲ ಪೊಲೀಸ್ ಸ್ಟೇಷನ್‌ನಲ್ಲಿ ಕನಿಷ್ಠ ಒಂದು ಸಿಸಿಟಿವಿ ಇದೆ

**18 ದೊಡ್ಡ ಮತ್ತು ಮಧ್ಯಮ ಗಾತ್ರದ ರಾಜ್ಯಗಳ ರ್‍ಯಾಂಕಿಂಗ್:**

| ರಾಜ್ಯಗಳು | ರ್‍ಯಾಂಕ್ 2022 | ರ್‍ಯಾಂಕ್ 2020 |
|---|---|---|
| ಕರ್ನಾಟಕ | 1 | 14 |
| ತಮಿಳುನಾಡು | 2 | 2 |
| ತೆಲಂಗಾಣ | 3 | 3 |
| ಗುಜರಾತ್ | 4 | 6 |
| ಆಂಧ್ರ ಪ್ರದೇಶ | 5 | 12 |
| ಕೇರಳ | 6 | 5 |
| ಜಾರ್ಖಂಡ | 7 | 8 |
| ಮಧ್ಯಪ್ರದೇಶ | 8 | 16 |
| ಛತ್ತೀಸ್‌ಗಢ | 9 | 7 |
| ಒಡಿಶಾ | 10 | 4 |
| ಮಹಾರಾಷ್ಟ್ರ | 11 | 11 |

| | | |
|---|---|---|
| ಪಂಜಾಬ್ | 12 | 1 |
| ಹರ್ಯಾಣ | 13 | 9 |
| ಉತ್ತರಾಖಂಡ | 14 | 15 |
| ರಾಜಸ್ಥಾನ | 15 | 10 |
| ಬಿಹಾರ | 16 | 13 |
| ಪಶ್ಚಿಮ ಬಂಗಾಳ | 17 | 17 |
| ಉತ್ತರ ಪ್ರದೇಶ | 18 | 18 |

**ಏಳು ಸಣ್ಣ ರಾಜ್ಯಗಳ ರ್‍ಯಾಂಕಿಂಗ್:**

| ರಾಜ್ಯಗಳು | ರ್‍ಯಾಂಕ್ 2022 | ರ್‍ಯಾಂಕ್ 2020 |
|---|---|---|
| ಸಿಕ್ಕಿಂ | 1 | 2 |
| ಅರುಣಾಚಲ ಪ್ರದೇಶ | 2 | 5 |
| ತ್ರಿಪುರಾ | 3 | 1 |
| ಮೇಘಾಲಯ | 4 | 7 |
| ಮಿಜೋರಾಮ್ | 5 | 6 |
| ಹಿಮಾಚಲ ಪ್ರದೇಶ | 6 | 4 |
| ಗೋವಾ | 7 | 3 |

**ದೇಶದಲ್ಲಿ ಗಮನಾರ್ಹವಾಗಿ ಸುಧಾರಣೆ ಕಂಡುಬಂದಿದೆ, ಆದರೆ ಕೊರತೆ ಮುಂದುವರಿದಿದೆ**

ಈ ಹಿಂದಿನ ಎರಡು ಐಜೆಆರ್ ರೀತಿಯಲ್ಲಿ, 2022 ರಲ್ಲೂ ಅಖಿಲ ಭಾರತ ಚಿತ್ರಣಕ್ಕಾಗಿ ಫಲಿತಾಂಶವನ್ನು ಕ್ರೋಢೀಕರಿಸಿದಾಗ ಕೊರತೆ ಕಂಡುಬರುತ್ತದೆ.

ಖಾಲಿ ಹುದ್ದೆಯು ಪೊಲೀಸ್, ಜೈಲು ಸಿಬ್ಬಂದಿ, ಕಾನೂನು ನೆರವು ಮತ್ತು ನ್ಯಾಯಾಂಗದಲ್ಲಿ ಒಂದು ಸಮಸ್ಯೆಯಾಗಿಯೇ ಇದೆ.

1.4 ಬಿಲಿಯನ್ ಜನರಿಗೆ ಭಾರತದಲ್ಲಿ 20,076 ಜಡ್ಜ್‌ಗಳು ಇದ್ದಾರೆ. ಮಂಜೂರಾಗಿರುವ 22% ಹುದ್ದೆಗಳು ಖಾಲಿ ಇವೆ. ಹೈಕೋರ್ಟ್ ಜಡ್ಜ್‌ಗಳ ಖಾಲಿ ಹುದ್ದೆಯು 30% ಇದೆ. ಡಿಸೆಂಬರ್ 2022 ರ ಪ್ರಕಾರ, ಮಂಜೂರಾತದ ಸಾಮರ್ಥ್ಯಕ್ಕೆ ಹೋಲಿಸಿದರೆ ಪ್ರತಿ ಮಿಲಿಯನ್ ಜನಸಂಖ್ಯೆಗೆ 19 ಜಡ್ಜ್‌ಗಳನ್ನು ಭಾರತ ಹೊಂದಿದೆ ಮತ್ತು 4.8 ಕೋಟಿ ಪ್ರಕರಣಗಳು ಬಾಕಿ ಇವೆ. ಒಂದು ದಶಕದೊಳಗಾಗಿ ಪ್ರತಿ ಮಿಲಿಯನ್ ಜನರಿಗೆ 50 ಜಡ್ಜ್‌ಗಳು ಇರಬೇಕು ಎಂದು 1987 ರಲ್ಲಿ ಕಾನೂನು ಆಯೋಗ ಅಪೇಕ್ಷಿಸಿತ್ತು.

ಪೊಲೀಸ್ ಇಲಾಖೆಯಲ್ಲಿ, ಮಹಿಳೆಯರ ಸಂಖ್ಯೆ ಕೇವಲ ಶೇ. 11.75 ಇದೆ. ಕಳೆದ ಒಂದು ದಶಕದಲ್ಲಿ ಅವರ ಸಂಖ್ಯೆ ದುಪ್ಪಟ್ಟಾಗಿದ್ದರೂ ಈ ಕೊರತೆ ಇದೆ. ಸುಮಾರು 29% ಅಧಿಕಾರಿ ಹುದ್ದೆಗಳು ಖಾಲಿ ಇವೆ. ಜನಸಂಖ್ಯೆಗೆ ಪೊಲೀಸರ ಅನುಪಾತವು ಪ್ರತಿ ಲಕ್ಷಕ್ಕೆ 152.8 ಆಗಿದೆ. ಅಂತಾರಾಷ್ಟ್ರೀಯ ಮಾನದಂಡವು 222 ಆಗಿದೆ.

ಕೈದಿಗಳು ಅಪಾರ ಸಂಖ್ಯೆಯಲ್ಲಿದ್ದು, 130% ಕ್ಕೂ ಹೆಚ್ಚಿದ್ದಾರೆ. ಮೂರರಲ್ಲಿ ಎರಡಕ್ಕಿಂತ ಹೆಚ್ಚು ಕೈದಿಗಳು (77.1%) ತಮ್ಮ ತನಿಖೆ ಅಥವಾ ವಿಚಾರಣೆ ಪೂರ್ಣಗೊಳ್ಳುವ ನಿರೀಕ್ಷೆಯಲ್ಲಿದ್ದಾರೆ.

ಕೇಂದ್ರ ಸರ್ಕಾರವು ನೀಡಿದ ಹಣವನ್ನು ಬಹುತೇಕ ರಾಜ್ಯಗಳು ಸಂಪೂರ್ಣ ಬಳಸಿಕೊಂಡಿಲ್ಲ. ರಾಜ್ಯದ ಒಟ್ಟಾರೆ ವೆಚ್ಚದ ಏರಿಕೆಗೆ ಹೋಲಿಸಿದರೆ ಪೊಲಿಸ್, ಕೈದಿಗಳು ಮತ್ತು ನ್ಯಾಯಾಂಗದ ಮೇಲಿನ ವೆಚ್ಚ ಏರಿಕೆಯಾಗಿಲ್ಲ.

ಇಡೀ ನ್ಯಾಯಾಂಗ ವ್ಯವಸ್ಥೆಯೇ ಕಡಿಮೆ ಸಂಖ್ಯೆಯ ಜಡ್ಜ್‌ಗಳಿಂದ ಬಾಧಿಸಲ್ಪಟ್ಟಿದೆ. ದೆಹಲಿ ಮತ್ತು ಚಂಡೀಗಢ ಕೇಂದ್ರಾಡಳಿತ ಪ್ರದೇಶಗಳನ್ನು ಹೊರತುಪಡಿಸಿ, ತನ್ನ ಒಟ್ಟು ವಾರ್ಷಿಕ ವೆಚ್ಚದಲ್ಲಿ ಶೇ. 1 ಕ್ಕಿಂತ ಹೆಚ್ಚನ್ನು ನ್ಯಾಯಾಂಗದ ಮೇಲೆ ಯಾವ ರಾಜ್ಯವೂ ವೆಚ್ಚ ಮಾಡುವುದಿಲ್ಲ.

ಉಚಿತ ಕಾನೂನು ನೆರವಿನ ಮೇಲೆ ಭಾರತದ ತಲಾ ವೆಚ್ಚವು ವಾರ್ಷಿಕ ಕೇವಲ ರೂ. 3.87 ಆಗಿದೆ. ದೇಶದ 80% ಜನಸಂಖ್ಯೆಯು ಉಚಿತ ಕಾನೂನು ನೆರವಿಗೆ ಅರ್ಹರಾಗಿದ್ದಾರೆ.

**ಇಂಡಿಯಾ ಜಸ್ಟೀಸ್ ರಿಪೋರ್ಟ್ ಬಗ್ಗೆ ಮಾತನಾಡಿದ ಜಸ್ಟೀಸ್ (ನಿವೃತ್ತ) ಮದನ್ ಬಿ ಲೋಕೂರ್**, "ವೈವಿಧ್ಯತೆ, ತರಬೇತಿ ಮತ್ತು ಮೂಲಸೌಕರ್ಯದ ವಿಷಯದಲ್ಲಿ ಹೊಸ ಆಯಾಮಗಳನ್ನು ಪಡೆದುಕೊಳ್ಳುವಂತೆ ಕಳೆದ ಎರಡು ಐಜೆಆರ್‌ಗೆ ಹೋಲಿಸಿದರೆ ಮೂರನೇ ಐಜೆಆರ್‌ನಲ್ಲಿ ಗಮನಾರ್ಹ ಸುಧಾರಣೆ ಸಾಧಿಸಿರುವುದನ್ನು ತೋರಿಸುತ್ತಿದೆ. ಕೆಲವು ರಾಜ್ಯಗಳು ತಮ್ಮ ಕಾರ್ಯಕ್ಷಮತೆಯಲ್ಲಿ ಗಮನಾರ್ಹ ಸಾಧನೆ ಮಾಡಿವೆ. ಆದರೆ, ಒಟ್ಟಾರೆಯಾಗಿ ಇನ್ನೂ ಹಲವು ಕೆಲಸ ಆಗಬೇಕಿದೆ. ಪೊಲೀಸ್ ಇಲಾಖೆಯಲ್ಲಿ ಮಹಿಳೆಯ ಕೊರತೆ ಇರುವುದು ಒಂದು ಕಳವಳಕಾರಿ ಸಂಗತಿಯಾಗಿದೆ. ಕಾನೂನು ನೆರವು ವಿಚಾರದಲ್ಲಿ ಸುಧಾರಣೆಯಾಗುತ್ತಿದೆ. ಆದರೆ, ತುಂಬಾ ಜನರಿಗೆ ಗುಣಮಟ್ಟದ ಉಚಿತ ಕಾನೂನು ನೆರವು ನೀಡಬೇಕಿದೆ. ಜನರಿಗೆ ನಮ್ಮ ಸೇವೆ ಸಿಗುತ್ತಿದೆ ಎಂಬ ವಿಶ್ವಾಸವನ್ನು ನಾವು ಹೆಚ್ಚಿಸಬೇಕಿದೆ."

**ಇಂಡಿಯಾ ಜಸ್ಟೀಸ್ ರಿಪೋರ್ಟ್ 2022 ಮುಖ್ಯ ಸಂಪಾದಕ ಮಜಾ ದಾರುವಾಲ** ಹೇಳುವಂತೆ "ಅಂತಾರಾಷ್ಟ್ರೀಯ ಸದಸ್ಯನಾಗಿ ಮತ್ತು ಅತ್ಯಂತ ಮುಖ್ಯವಾಗಿ ತನಗೇ ಮಾಡಿದ ಭರವಸೆಯ ಪ್ರಕಾರ, 2030 ರ ವೇಳೆಗೆ ಎಲ್ಲರಿಗೂ ನ್ಯಾಯ ಪಡೆಯುವ ಅವಕಾಶವನ್ನು ಒದಗಿಸಲಾಗುತ್ತದೆ ಮತ್ತು ಎಲ್ಲ ಹಂತಗಳಲ್ಲಿ ಪರಿಣಾಮಕಾರಿ, ಹೊಣೆಗಾರಿಕೆಯುಳ್ಳ ಮತ್ತು ಸಮಗ್ರವಾದ ಸಂಸ್ಥೆಗಳನ್ನು ನಿರ್ಮಿಸುವ ಭರವಸೆಯನ್ನು ಭಾರತ ನೀಡಿದೆ. ಆದರೆ, ಈ ವರ್ಷದ ಐಜೆಆರ್ ಒದಗಿಸಿದ ಅಧಿಕೃತ ಅಂಕಿ ಅಂಶಗಳ ಪ್ರಕಾರ ನಾವು ಇನ್ನೂ ದೂರ ಸಾಗಬೇಕಿದೆ. ಕೈಗೆಟುಕುವ ದಕ್ಷ ಮತ್ತು ಎಲ್ಲರಿಗೂ ಲಭ್ಯ ನ್ಯಾಯಾಂಗ ಸೇವೆಗಳನ್ನು ಆಹಾರ, ಶಿಕ್ಷಣ ಹಾಗೂ ಆರೋಗ್ಯದಷ್ಟೇ ಅಗತ್ಯ ಎಂದು ನಾವು ಪರಿಗಣಿಸಬೇಕು ಎಂದು ನಾನು ಆಗ್ರಹಿಸುತ್ತೇನೆ. ಇದಕ್ಕಾಗಿ ಹೆಚ್ಚಿನ ಸಂಪನ್ಮೂಲವನ್ನು ಇದರಲ್ಲಿ ತೊಡಗಿಸಬೇಕು. ಹೆಚ್ಚಿನ ಸಾಮರ್ಥ್ಯ ನಿರ್ಮಾಣ ಮಾಡಬೇಕು ಮತ್ತು ದೀರ್ಘಕಾಲದಿಂದಲೂ ಇರುವ ಕೊರತೆಯನ್ನು ನೀಗಿಸಲು ಹೆಚ್ಚಿನ ಗಮನ ಹರಿಸುವ ಅಗತ್ಯವಿದೆ."

**ವಿಶಾಲವಾದ ರಾಷ್ಟ್ರೀಯ ಮಟ್ಟದ ಫಲಿತಾಂಶಗಳು:**

**ಖಾಲಿ ಹುದ್ದೆಗಳು**

ರಾಷ್ಟ್ರೀಯವಾಗಿ ಐಜೆಆರ್ 2022 ರಲ್ಲಿ ನ್ಯಾಯ ವ್ಯವಸ್ಥೆಯಲ್ಲಿನ ಖಾಲಿ ಹುದ್ದೆಗಳು:

- **ಪೊಲೀಸ್:** 22% (ಪೇದೆಗಳು), 29% (ಅಧಿಕಾರಿಗಳು)
- **ಜೈಲುಗಳು:** 28% (ಅಧಿಕಾರಿಗಳು), 26% (ಕೇಡರ್ ಸಿಬ್ಬಂದಿ), 36% (ತರಬೇತಿ ನೀಡುವ ಸಿಬ್ಬಂದಿ), 41% (ವೈದ್ಯಕೀಯ ಸಿಬ್ಬಂದಿ), 48% (ವೈದ್ಯಕೀಯ ಅಧಿಕಾರಿಗಳು)
- **ನ್ಯಾಯಾಂಗ:** 30% (ಹೈ ಕೋರ್ಟ್ ಜಡ್ಜ್‌ಗಳು), 22% (ಅಧಿನ ನ್ಯಾಯಾಂಗ ಜಡ್ಜ್‌ಗಳು), 26% (ಹೈ ಕೋರ್ಟ್ ಸಿಬ್ಬಂದಿ)
- **ಕಾನೂನು ನೆರವು:** 12% (ಡಿಎಲ್ಎಸ್ಎ ಕಾರ್ಯದರ್ಶಿ)

ಕೆಲವು ರಾಜ್ಯಗಳು ಖಾಲಿ ಹುದ್ದೆಗಳನ್ನು ಕಡಿಮೆ ಮಾಡಿವೆ:

- **ಪೊಲೀಸ್:** ತೆಲಂಗಾಣದಲ್ಲಿ ಪೊಲೀಸ್ ಪೇದೆ ಖಾಲಿ ಹುದ್ದೆ ಪ್ರಮಾಣ 26% ಇಂದ 40% ಮತ್ತು ಮಧ್ಯಪ್ರದೇಶದಲ್ಲಿ ಅಧಿಕಾರಿಗಳ ಖಾಲಿ ಹುದ್ದೆ ಪ್ರಮಾಣ 49% ಇಂದ 21% ಕ್ಕೆ ಇಳಿಕೆಯಾಗಿದೆ
- **ಜೈಲುಗಳು:** ಬಿಹಾರದಲ್ಲಿ ಅಧಿಕಾರಿಗಳ ಖಾಲಿ ಹುದ್ದೆ 66% ಇಂದ 26% ಕ್ಕೆ ಇಳಿಕೆಯಾಗಿದೆ

- **ನ್ಯಾಯಾಂಗ:** ತ್ರಿಪುರಾದಲ್ಲಿ ಅಧೀನ ನ್ಯಾಯಾಲಯದ ಜಡ್ಜ್‌ಗಳ ಖಾಲಿ ಹುದ್ದೆ ಪ್ರಮಾಣ 305 ರಿಂದ 11% ಕ್ಕೆ ಮತ್ತು ಆಂಧ್ರ ಪ್ರದೇಶದಲ್ಲಿ ಹೈ ಕೋರ್ಟ್ ಜಡ್ಜ್‌ಗಳ ಖಾಲಿ ಹುದ್ದೆ ಪ್ರಮಾಣ 70% ರಿಂದ 19% ಕ್ಕೆ ಇಳಿಕೆಯಾಗಿದೆ
- **ಕಾನೂನು ನೆರವು:** ಛತ್ತೀಸ್‌ಗಢದ ಡಿಎಲ್‌ಎಸ್‌ಎ ಕಾರ್ಯದರ್ಶಿ ಖಾಲಿ ಹುದ್ದೆ ಪ್ರಮಾಣ 48% ರಿಂದ ಶೂನ್ಯಕ್ಕೆ ಇಳಿಕೆಯಾಗಿದೆ

***ಮೂರೂ ಆಧಾರ ಸ್ತಂಭಗಳಲ್ಲಿ (ನ್ಯಾಯಾಂಗ, ಪೊಲೀಸ್ ಮತ್ತು ನ್ಯಾಯಾಂಗ) ಕೇವಲ ಜಾರ್ಖಂಡ ಮತ್ತು ಉತ್ತರ ಪ್ರದೇಶ ಮಾತ್ರ ಕಳೆದ 5 ವರ್ಷಗಳಲ್ಲಿ ಖಾಲಿ ಹುದ್ದೆಗಳನ್ನು ಕಡಿಮೆ ಮಾಡಲು ಸಾಧ್ಯವಾಗಿದೆ (2017-2022)***

**ವೈವಿಧ್ಯತೆ**

**ಪ.ಜಾ, ಪ.ಪಂ, ಒಬಿಸಿ ಕೋಟಾಗಳು:** ಪೊಲೀಸ್ ಅಧಿಕಾರಿಗಳು ಮತ್ತು ಪೇದೆ ಹುದ್ದೆಗಳಲ್ಲಿ ಪ.ಜಾ, ಪ.ಪಂ ಮತ್ತು ಒಬಿಸಿ ಕೋಟಾವನ್ನು ನಿರಂತರವಾಗಿ ಪೂರೈಸಿದ ಏಕೈಕ ರಾಜ್ಯ ಕರ್ನಾಟಕವಾಗಿದೆ.

ನ್ಯಾಯಾಂಗ ವ್ಯವಸ್ಥೆಯಲ್ಲಿ, ಅಧೀನ/ಜಿಲ್ಲಾ ನ್ಯಾಯಾಲಯದ ಮಟ್ಟದಲ್ಲಿ, ಯಾವುದೇ ರಾಜ್ಯವೂ ಈ ಮೂರೂ ಕೋಟಾಗಳನ್ನು ಪೂರೈಸಿಲ್ಲ. ಕೇವಲ ಗುಜರಾತ್ ಮತ್ತು ಛತ್ತೀಸ್‌ಗಢ ರಾಜ್ಯಗಳು ತಮ್ಮ ಎಸ್‌ಸಿ ಕೋಟಾಗಳನ್ನು ಪೂರೈಸಿವೆ. ಅರುಣಾಚಲ ಪ್ರದೇಶ, ತೆಲಂಗಾಣ ಮತ್ತು ಉತ್ತರಾಖಂಡವು ತಮ್ಮ ಎಸ್‌ಟಿ ಕೋಟಾಗಳನ್ನು ಪೂರೈಸಿವೆ. ಕೇರಳ, ಸಿಕ್ಕಿಂ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಛತ್ತೀಸ್‌ಗಢ ಮತ್ತು ತೆಲಂಗಾಣವು ಒಬಿಸಿ ಕೋಟಾ ಪೂರೈಸಿವೆ.

ನ್ಯಾಯ ವ್ಯವಸ್ಥೆಯಲ್ಲಿ (ಪೊಲೀಸ್, ಜೈಲು, ನ್ಯಾಯಾಂಗ ಮತ್ತು ಕಾನೂನು ನೆರವು) ಪ್ರಮುಖ ಹುದ್ದೆಗಳಲ್ಲಿ **ಮಹಿಳೆಯರ ಪಾಲು**: 10 ರಲ್ಲಿ 1 ಮಹಿಳೆಯರಿದ್ದಾರೆ.

ಪೊಲೀಸ್ ಪಡೆಯಲ್ಲಿ ಒಟ್ಟಾರೆ ಮಹಿಳೆಯರ ಪಾಲು 11.75% ಆಗಿದ್ದು, ಅಧಿಕಾರಿ ಶ್ರೇಣಿಯಲ್ಲಿ ಇನ್ನೂ ಇದು 8% ಆಗಿದೆ. ಹೈ ಕೋರ್ಟ್ ಜಡ್ಜ್‌ಗಳಲ್ಲಿ ಕೇವಲ 13% ಮತ್ತು ಅಧೀನ ನ್ಯಾಯಾಲಯದ ಜಡ್ಜ್‌ಗಳಲ್ಲಿ 35% ಮಹಿಳೆಯರಿದ್ದಾರೆ. ಜೈಲು ಸಿಬ್ಬಂದಿಯ ಪೈಕಿ ಮಹಿಳೆಯರು 13% ಇದ್ದಾರೆ. ಬಹುತೇಕ ರಾಜ್ಯಗಳು ಮಹಿಳಾ ಪ್ಯಾನೆಲ್ ವಕೀಲರ ಪಾಲನ್ನು ಹೆಚ್ಚಿಸಿಕೊಂಡಿವೆ. ರಾಷ್ಟ್ರೀಯ ಮಟ್ಟದಲ್ಲಿ ಈ ಪಾಲು 18% ರಿಂದ 25% ಕ್ಕೆ ಏರಿಕೆಯಾಗಿದೆ.

**ಮೂಲಸೌಕರ್ಯ**

**ಸಿಸಿಟಿವಿಗಳು:** ಸುಮಾರು 25% ಅಂದರೆ ನಾಲ್ಕರಲ್ಲಿ ಒಂದು ಪೊಲೀಸ್ ಸ್ಟೇಷನ್‌ಗಳಲ್ಲಿ ಒಂದು ಸಿಸಿಟಿವಿ ಇವೆ. 10 ರಲ್ಲಿ ಸುಮಾರು 3 ಪೊಲೀಸ್ ಸ್ಟೇಷನ್‌ಗಳಲ್ಲಿ ಮಹಿಳಾ ಸಹಾಯ ಡೆಸ್ಕ್‌ಗಳಿಲ್ಲ.

**ಕೈದಿಗಳ ಸಂಖ್ಯೆ:** ಸುಮಾರು 20% (391 ಕೈದಿಗಳು) ಆಕ್ಯುಪೆನ್ಸಿ (ಕೈದಿಗಳ ಸಂಖ್ಯೆ) 150% ದರಕ್ಕೂ ಹೆಚ್ಚಿವೆ ಮತ್ತು 54% ರಷ್ಟು (709 ಕೈದಿಗಳು) 100% ಕ್ಕೂ ಹೆಚ್ಚು ಸಾಮರ್ಥ್ಯವನ್ನು ಹೊಂದಿವೆ.

**ವಿಚಾರಣಾಧೀನ ಕೈದಿಗಳು:** ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಅರುಣಾಚಲ ಪ್ರದೇಶ, ಮಿಜೋರಾಮ್, ತ್ರಿಪುರಾ ಮತ್ತು ಮಧ್ಯಪ್ರದೇಶವನ್ನು ಹೊರತುಪಡಿಸಿ, ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿಚಾರಣಾಧೀನ ಕೈದಿಗಳ ಸಂಖ್ಯೆ 60% ಮೀರುತ್ತವೆ.

**ಕೆಲಸದ ಹೊರೆ**

**ನ್ಯಾಯಾಂಗ:**

- **ಬಾಕಿ ಇರುವ ಪ್ರಕರಣಗಳು:** 28 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ನಾಲ್ಕರಲ್ಲಿ ಒಂದು ಹೈ ಕೋರ್ಟ್ ಪ್ರಕರಣ ಐದು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಬಾಕಿ ಇದೆ. ಜಿಲ್ಲಾ ನ್ಯಾಯಾಲಯಗಳಲ್ಲಿ, 11 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ನಾಲ್ಕರಲ್ಲಿ ಒಂದು ಪ್ರಕರಣ ಐದು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಬಾಕಿ ಇದೆ.
- **ಪ್ರತಿ ಅಧೀನ ನ್ಯಾಯಾಲಯದ ಜಡ್ಜ್ ಸಂಖ್ಯೆ:** 71,224 ವ್ಯಕ್ತಿಗಳಿಗೆ
- **ಪ್ರತಿ ಹೈಕೋರ್ಟ್ ಜಡ್ಜ್ ಸಂಖ್ಯೆ:** 17,65,760 ವ್ಯಕ್ತಿಗಳಿಗೆ

**ಪೊಲೀಸ್:**

**ಪ್ರತಿ ನಾಗರಿಕ ಪೊಲೀಸ್ ಸಂಖ್ಯೆ:** 831 ವ್ಯಕ್ತಿಗಳಿಗೆ

**ಜೈಲು:**

**ವೈದ್ಯಕೀಯ ಅಧಿಕಾರಿಗಳು:** ಭಾರತದಲ್ಲಿ 554,000 ಕ್ಕೂ ಹೆಚ್ಚು ಕೈದಿಗಳಿಗಾಗಿ ಕೇವಲ 658 ವೈದ್ಯಕೀಯ ಅಧಿಕಾರಿಗಳು ಇದ್ದಾರೆ. ಇದರ ಸರಾಸರಿಯು 842 ಕೈದಿಗಳಿಗೆ ಒಂದು ವೈದ್ಯರು ಎಂದಾಯಿತು.

**ನ್ಯಾಯ ವ್ಯವಸ್ಥೆಗೆ ಬಜೆಟ್‌ನ ಒಂದು ಮುನ್ನೋಟ**

**ಕಾನೂನು ನೆರವು:** ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಎನ್‌ಎಎಲ್‌ಎಸ್‌ಎ) ಮತ್ತು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ವೆಚ್ಚವೂ ಸೇರಿದಂತೆ ಕಾನೂನು ನೆರವಿಗೆ ಮಾಡಿದ ರಾಷ್ಟ್ರೀಯ ತಲಾ ವೆಚ್ಚವು ವರ್ಷಕ್ಕೆ ಕೇವಲ ರೂ. 4.57 ಆಗಿದೆ. ಎನ್‌ಎಎಲ್‌ಎಸ್‌ಎ ಅನ್ನು ಹೊರತುಪಡಿಸಿ ಈ ಅಂಕಿ ಸಂಖ್ಯೆಯು ರೂ. 3.87 ಕ್ಕೆ ಕುಸಿಯುತ್ತದೆ ಮತ್ತು

ಕೇವಲ ಎನ್‌ಎಎಲ್‌ಎಸ್‌ಎ ಬಜೆಟ್ ಅನ್ನು ಮಾತ್ರ (2021-22) ಪರಿಗಣಿಸಿದರೆ ತಲಾ ವೆಚ್ಚವು ರೂ. 1.06 ಮಾತ್ರ ಆಗಿದೆ.

**ಜೈಲುಗಳು:** ಜೈಲುಗಳ ಮೇಲೆ ವೆಚ್ಚ ಮಾಡಿದ ರಾಷ್ಟ್ರೀಯ ತಲಾ ವೆಚ್ಚವು ರೂ. 43 ಆಗಿದೆ. ಕೈದಿಯ ಮೇಲೆ ವೆಚ್ಚ ಮಾಡಿದ ಸರಾಸರಿಯು ರೂ.43,062 ರಿಂದ ರೂ. 38,028 ಕ್ಕೆ ಕುಸಿದಿದೆ. ಆಂಧ್ರ ಪ್ರದೇಶದಲ್ಲಿ ಕೈದಿಯ ಮೇಲೆ ಅತಿ ಗರಿಷ್ಠ ಅಂದರೆ ರೂ. 211,157 ವೆಚ್ಚ ಮಾಡಲಾಗುತ್ತಿದೆ.

**ನ್ಯಾಯಾಂಗ:** ನ್ಯಾಯಾಂಗದಲ್ಲಿ ರಾಷ್ಟ್ರೀಯ ತಲಾ ವೆಚ್ಚವರು ರೂ. 146 ಆಗಿದೆ. ಯಾವುದೇ ರಾಜ್ಯವೂ ತನ್ನ ಒಟ್ಟು ವಾರ್ಷಿಕ ವೆಚ್ಚದ ಶೇ. 1 ಕ್ಕಿಂತ ಹೆಚ್ಚಿನದನ್ನು ನ್ಯಾಯಾಂಗದ ಮೇಲೆ ವೆಚ್ಚ ಮಾಡುವುದಿಲ್ಲ.

**ಪೊಲೀಸ್:** ಪೊಲೀಸ್ ಇಲಾಖೆಯ ಮೇಲೆ ರಾಷ್ಟ್ರೀಯ ತಲಾ ವೆಚ್ಚವು ರೂ. 1151 ಆಗಿದ್ದು, ನಾಲ್ಕು ಆಧಾರ ಸ್ತಂಭಗಳ ಪೈಕಿ ಅತಿ ಹೆಚ್ಚಿನದಾಗಿದೆ.

ಐಜೆಆರ್ 2022 ತಕ್ಷಣದ ಹಾಗೂ ಮೂಲ ಪರಿವರ್ತನೀಯತೆಯ ಮೇಲೆ ಗಮನಹರಿಸಿದೆ. ತುರ್ತಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಮತ್ತು ಪ್ರತಿನಿಧಿತ್ವವನ್ನು ಹೆಚ್ಚಿಸುವುದು ಅಗತ್ಯವಿದೆ ಎಂದು ವರದಿ ಆಡಿದೆ. ಈ ನಿಟ್ಟಿನಲ್ಲಿ ಮಹತ್ವದ ಬದಲಾವಣೆಯನ್ನು ಉಂಟು ಮಾಡುವುದಕ್ಕೆ, ನ್ಯಾಯದಾನವನ್ನು ಅಗತ್ಯ ಸೇವೆಗಳು ಎಂದು ನಿಯೋಜಿಸಬೇಕು ಎಂದು ಪ್ರತಿಪಾದಿಸಿದೆ.

---------

**Notes to the Editor:**

1. For key findings on each pillar, please refer to the National Factsheet.
2. For further details and perspective please refer to respective pillar backgrounders or visit: https://indiajusticereport.org/
3. For an interactive web-visualization to compare and assess states, please visit: https://indiajusticereport.org/
4. The India Justice Report 2022, national factsheet and an interactive web output will be available at https://indiajusticereport.org/
5. The IJR 2022 uses the latest official data available at the time of going to press: for the police it is 1 January 2022; prisons 31 December 2021; judiciary uses data from 2022 and 2023; and for legal aid for 2021-22 and March and June 2022. Population figures are sourced from the National Commission on Population 2019 and budget figures rely on Comptroller and Auditor General reports and state budget documents for 2020-21

**For further details, please contact:**

| | | |
|---|---|---|
| Valay Singh<br>India Justice Report<br>E: valaysingh@gmail.com<br>M: 9717676026 | Jeunelle Rebello<br>Current Global<br>E: jrebello@currentglobal.com<br>M: 8806749170 | Nayantara Dutta<br><br>Tata Trusts<br><br>E: ndutta@tatatrusts.org<br><br>M: 9819052678 |